'ಯಾಕೆ?'

ಅವಳೆಂದಳು:

'ನಾವು ಹೋಗೋಣ!'

'ಎಲ್ಲಿಗೆ?'

'ನನ್ನ ಮನೆಗೆ.'

ಅವನಿಗೆ ಭಯ. ಏನಾದರೂ ಎಡವಟ್ಟಾದರೆ! ಜೊತೆಗಾರರಿಗೆ ತಿಳಿದರೆ ಅವಮಾನವಲ್ಲವೇ? ಆದರೂ ಕಡಿವಾಣ ಹಿಡಿದುಕೊಂಡು ಮುಂದೆ ನಡೆಯುವ ರಾವುತನ ಹಿಂದೆ ಹೋಗುವ ಕುದುರೆಯ ಹಾಗೆ ಅವಳ ಹಿಂದೆಯೇ ಆತ ಹೋದ. ಕತ್ತಲ ಮರಗಳ ನಡುವೆ ಆ ಗುಡಿಸಲು ಕರಿಯ ರಾಶಿಯಂತೆ ಇರುಳಲ್ಲಿ ಅಸ್ಪಷ್ಟವಾಗಿ ಗೋಚರಿಸಿತು. ಬೆಳಕಿಲ್ಲ. ಸ್ವಚ್ಛವೂ ಇಲ್ಲ, ಗಂಭೀರ ಮೌನ, ಆತ ಹಿಂಜರಿದು ನಿಂತುಬಿಟ್ಟ.

'ಹೆದರಬೇಕಾಗಿಲ್ಲ, ಬನ್ನಿ' ಅವಳು ಅವನ ಕೈ ಹಿಡಿದಳು.

ಅವನು ನಡುಕದೊಂದಿಗೆ ಕೇಳಿದ:

'ನೆರೆಮನೆಗಳಲ್ಲಿ?...'

ಅವಳು ಧೈರ್ಯವಾಗಿ ಹೇಳಿದಳು.

'ಓ! ಇದು ನನ್ನ ಸ್ವಂತ ಮನೆ. ನಾನಲ್ಲವೆ ಇದಕ್ಕೆ ತೆರಿಗೆ ಕಟ್ಟುವುದು? ಯಾರಾದರೂ ನನ್ನ ಅನುಮತಿಯಿಲ್ಲದೆ ಇಲ್ಲಿಗೆ ಬಂದರೆ ನಾನವರನ್ನು ಥೂ! ಹೊಡೆದೋಡಿಸುವೆ.'

ಅವಳಿಗೆ ಧೈರ್ಯವಿದೆ.

ಅವನು ಅವಳ ಜೊತೆ ವರಾಂಡಕ್ಕೆ ಹೋಗಿ ಬೆಂಕಿಕಡ್ಡಿ ಗೀರಿದ.

ಆತ ಹೆದರಿದ. ಆ ಮಂದ ಬೆಳಕಿನಲ್ಲಿ ಒಬ್ಬಾಕೆ ಹೆಂಗಸು, ಮುದುಡಿಕೊಂಡು ವರಾಂಡದಲ್ಲಿ ಕುಳಿತಿದ್ದಾಳೆ.

'ಅಮ್ಮ' ಅವಳು ಹೇಳಿದಳು. 'ಇಲ್ಲಿ ಬನ್ನಿ!'

ಅವನ ಭಾವಾವೇಶ ತಣಿಯಿತು. ಅಮ್ಮ ನೋಡಿದ್ದು ಹಿತವೆನಿಸಲಿಲ್ಲ. ತೊಂದರೆ. ಹಿಂತಿರುಗಿ ಹೋದರೆ ಹೇಗೆ?

ಆಕೆ ಬಾಗಿಲು ತೆರೆದಳು. ಆಗ ಉಂಟಾದ ಶಬ್ದ ಪ್ರಪಂಚಕ್ಕೆಲ್ಲ ಕೇಳಿಸಿತು. ಅವನು ಒಳಗೆ ದಾಟಿದ. ಮಾಸಿದ ವಸ್ತ್ರಗಳ ಮತ್ತು ಒಂದು ತೆರನ ಅಸಹ್ಯ ವಾಸನೆ.

ಅವಳು ಹೇಳಿದಳು.

'ಇನ್ನೊಂದು ಕಡ್ಡಿಯನ್ನು ಉರಿಸಿ!'

ಅವನು ಕಡ್ಡಿಗೀರಿದ. ಒಂದು ಸೀಮೆ ಎಣ್ಣೆ ಬುಡ್ಡಿಗೆ ಹಚ್ಚಿದ. ಅಷ್ಟರಲ್ಲಿ ಬೇರೊಂದು ಬಾಗಿಲೂ ತೆರೆಯಿತು! ಅವನ ಆವೇಶ ಸತ್ತಿತು. ಹೆಣಗಳಂತೆ ಬಿಳಿಚಿಕೊಂಡ ಇಬ್ಬರು ಮಕ್ಕಳು! ಅಲುಗಾಟವಿಲ್ಲದೆ ಬಾಗಿಲಿನ ಬಳಿ ಬಿದ್ದುಕೊಂಡಿವೆ. ಉಬ್ಬಿದ ಹೊಟ್ಟೆ ಕ್ಷೀಣಿಸಿದ ಕೈಕಾಲುಗಳು – ಹತ್ತಿರದಲ್ಲೇ ಒಬ್ಬ ಮುದುಕನೂ.

'ತಂದೆ!' ಅವಳು ಮೆದುವಾಗಿ ಹೇಳಿದಳು. 'ಕಣ್ಣು ಕಾಣಿಸುವುದಿಲ್ಲ!'

ಅವನು ಮೆಲುದನಿಯಲ್ಲಿ ಕೇಳಿದ:

'ಮಕ್ಕಳು!'

ಅವಳು ಅದನ್ನು ಕೇಳಿಸಿಕೊಳ್ಳದಂತೆ ಬಟ್ಟೆಗಳನ್ನು ಬಿಚ್ಚಿ ಕೆಳಗೆ ಹಾಕಿದಳು. ಪೂರ್ತಿ ಬೆತ್ತಲೆ! ಆರೋಗ್ಯವಾದ ಬೆತ್ತಲೆ ಹೆಣ್ಣನ್ನು ಮೊತ್ತ ಮೊದಲಿಗೆ ನೋಡುತ್ತಿದ್ದಾನೆ. ಅವಳು ದೀಪ ಆರಿಸಿದಳು.